ರೋಗಿಯಾದೆ. ಮೂಗಿಗೆ ಟ್ಯೂಬ್ ಹಾಕಿದರು. ಇಂಜೆಕ್ಷನ್ ಕೊಡಲು ಕೈನ ರಕ್ತನಾಳದೊಳಕ್ಕೆ ಕೊಳವೆ ತೂರಿಸಿದರು. ಟ್ರೆಡ್ ಮಿಲ್ ಎಂದು ಸೈಕಲ್ ಹೊಡೆಸಿದರು. ಮತ್ತೊಮ್ಮೆ ಎಕ್ಸರೇ-ಇಸಿಜಿ ಇತ್ಯಾದಿಗಳನ್ನು ಮಾಡಿದರು. ಎರಡು ದಿನಗಳ ನಂತರ ಈ ಎಲ್ಲ ರಿಪೋರ್ಟುಗಳನ್ನು ನೋಡಿದ ವೈದ್ಯಭಾನು, 'ನಿಮಗೇನೂ ಇಲ್ಲ, ಮನೆಗೆ ಹೋಗ್ರೀ' ಎಂದು ಡಿಸ್‌ಚಾರ್ಜಿಗೆ ಬರೆದರು.

'ಹಾಗಿದ್ದ ಮೇಲೆ ಈ ಎದೆ ನೋವು ಪದೇ ಪದೇ ಯಾಕೆ ಬರುತ್ತೇ ಡಾಕ್ಟರೇ' ಎಂದು ನಾನು ಕೇಳಿದೆ.

'ರೀ ಪತ್ರಕರ್ತ ಮಹಾಶಯರೇ, ನಿಮಗೇನೂ ಆಗಿಲ್ಲ. ನಿಮ್ಮ ಹಾರ್ಟು ಹಿಮಾಲಯ ಪರ್ವತದಷ್ಟು ಭದ್ರವಾಗಿದೆ. ಗ್ಯಾಸ್ ಇರಬೇಕು. ದಿನಾ ಎರಡೆರಡು ಜೆಲೂಸಿಲ್ ಚೀಪಿ' ಎಂದರು.

'ಡಾಕ್ಟರೇ, ಈಗೀಗ ನಮ್ಮ ಹಿಮಾಲಯ ಪರ್ವತಾನೂ ಕುಸೀತದೆ. ಉತ್ತರಖಂಡ, ಜೋಶಿಮಠದ ವರದಿಗಳನ್ನೆಲ್ಲ ನೋಡಿದ್ದೀರಲ್ಲ' ಎಂದೆ.

'ನೋಡಿ, ಇಲ್ಲಿ ನೀವು ರೋಗಿ, ನಾನು ಡಾಕ್ಟರು ಅಷ್ಟೆ. ಅದಕ್ಕಿಂತ ಹೆಚ್ಚಿಗೆ ಮಾತಾಡಿದರೆ, ಎಕ್ಸ್‌ಟ್ರಾ ಪಾಯಿಂಟ್ ಎಕ್ಸ್‌ಟ್ರಾ ಫೀಜ್' ಎಂದರು.

ಈಗಾಗಲೇ ಮೂರು ಸಾವಿರಕ್ಕೂ ಹೆಚ್ಚು ಪೀಕಿದ್ದ ನಾನು ಬಾಯಿ ಮುಚ್ಚಿಕೊಂಡು ಎದ್ದು ಬಂದೆ.

ಹೃದಯ ಹಿಮವತ್ ಪರ್ವತ ಎಂದು ಸಮಾಧಾನಗೊಳ್ಳುತ್ತಿರುವಾಗಲೇ ವಾಯು ಜೀವೋತ್ತಮರು ತಮ್ಮ ಎಂದಿನ ಕಾರ್ಯಾಚರಣೆಯಲ್ಲಿ ತೊಡಗಿದ್ದರು. ದೇಹದ ಎಲ್ಲ ಭಾಗಗಳಲ್ಲೂ ಸಂಚರಿಸುತ್ತಿದ್ದರು. ಈ ಸಂಚಲನವೊಂದು ವೇದನಾಮಯ ಸಂಚಲನ. ಅನುಭವಿಸಿದವರಿಗೇ ಗೊತ್ತು. ಇದು ದೈಹಿಕ ನೋವೂ ಹೌದು, ಮಾನಸಿಕ ನೋವೂ ಹೌದು. ಜೀವೋತ್ತಮ ವಾಯುವಿನ ಪ್ರಭಾವ ಮೊದಲ ಬಾರಿಗೆ ನನಗೆ ಅರಿವಿಗೆ ಬಂತು. ನಾನು ದಿನಾ ಜೆಲೂಸಿಲ್ ತೆಗೆದುಕೊಳ್ಳುವುದನ್ನು ಕಂಡು ನನ್ನ ಮೊಮ್ಮಗಳು, 'ತಾತ, ದಿನಾ ಜೆಲೂಸಿಲ್ ಬದಲು ಜೀನ್ಸ್ ಪ್ಯಾಂಟ್ ಹಾಕ್ಕೊಂಡು ಬಿಡು' ಎಂದು ಪ್ರಾಸ ಜೋಡಿಸಿ ಹೇಳಿದಳು. ಹೀಗೆ ಶುರುವಾಯಿತು ವಾಯುಜೀವೋತ್ತಮರ ಔಷಧಿ ಅಕೌಂಟು. ಆದರೆ, ವಾಯು ಜೀವೋತ್ತಮರು ಸುಮ್ಮನಾಗಲಿಲ್ಲ. ಉದಾನ ವಾಯು, ಅಪಾನವಾಯುಗಳಲ್ಲೂ 'ಫರ್-ಭುರ್ ಎಂದು ಸ್ಫೋಟಿಸಿ ತಮ್ಮ ಅಸ್ತಿತ್ವವನ್ನು ಘೋಷಿಸುತ್ತಿದ್ದರು. ಒಂದು ದಿನ ನನ್ನ ಅಚ್ಚುಮೆಚ್ಚಿನ ಮೊಮ್ಮಗಳು ಪಕ್ಕದ ಮನೆಯ ತನ್ನ ಸ್ನೇಹಿತೆಯೊಂದಿಗೆ ಹಾಲಿನಲ್ಲಿ ಅಳಗುಳಿ ಮನೆ ಆಡುತ್ತಿದ್ದಳು. ಆಗ ಉದಾನವಾಯು ಸ್ಫೋಟಿಸಿಬಿಟ್ಟಿತು. 'ಅಪರ್ಣಾ, ನಿನ್ನ ತಾತ ಬಾಯಲ್ಲೂ ಎಷ್ಟು ಜೋರಾಗಿ ಹೂಸುತ್ತಾರೆ ಗೊತ್ತಾ' ಎನ್ನೋದೆ ಮೊಮ್ಮಗಳ ಗೆಳತಿ. ಅಯ್ಯೋ ದೇವರೇ, ನನ್ನ ಮಾನ ಹೀಗೂ ಹರಾಜಾಯ್ತು ಎಂದು ವ್ಯಥೆ ಪಟ್ಟೆ.

ಮುಂದೆರಡು ದಿನಗಳಲ್ಲಿ ಸಹಿಸಲಸಾಧ್ಯವಾದ ಬೆನ್ನು ನೋವು ಶುರುವಾಯಿತು. ನಾಭಿ ಮೂಲದಿಂದ ಆರಂಭವಾಗಿ ಹೆಕ್ಕತ್ತಿನವರೆಗೆ ನೋವು ವ್ಯಾಪಿಸಿತು. ನೋವಿನೊಂದಿಗೆ ಬೆನ್ನೊಳಗೆ ಬಿಸಿನೀರಿನ ತೊರೆಯೊಂದು ಜುಳುಜುಳು ಹರಿದಂತೆ ಛಳುಕು ಹೊಡೆಯುತ್ತಿತ್ತು. ನನ್ನ ಸ್ಥಳೀಯ ಧನ್ವಂತರಿಗಳು ಪೇನ್ ಕಿಲ್ಲರ್ ಬರೆದುಕೊಟ್ಟರು. ಅದರ ಪ್ರಭಾವ ಇರುವವರೆಗೆ ತಡೆದುಕೊಳ್ಳುವಂತಿತ್ತು. ಮತ್ತೆ ಅಸಹನೀಯವಾದ ನೋವು. 'ನೋಡಿ, ನೀವು ಹೇಗಾದರೂ ಒಬ್ಬ ಆರ್ಥೋ ಸರ್ಜನರನ್ನು ಕಾಣುವುದು ಉತ್ತಮ' ಎಂದು ಸಲಹೆ ಮಾಡಿದರು. ಕನ್ಸಲ್ಟೇಷನ್ ಫೀ 600 ರೂಪಾಯಿ ತೆಗೆದುಕೊಂಡ ಸೂಪರ್ ಆಸ್ಪತ್ರೆಯ ಸ್ವಾಗತಗಿತ್ತಿ ನನ್ನನ್ನು ಸರ್ಜನರ ಚೇಂಬರಿಗೆ ಕಳುಹಿಸಿದಳು. ಸರ್ಜನರು ಎಲ್ಲವನ್ನೂ ಕೇಳಿಸಿಕೊಂಡ ನಂತರ, 'ನಿಮ್ಮ ವಯಸ್ಸೆಷ್ಟು' ಎಂದು ಕೇಳಿದರು. 'ಎಂಬತ್ತೊಂದು ತುಂಬಿತು' ಎಂದೆ.

'ಯಾವುದಕ್ಕೂ ನೀವೊಂದು ಸಿಟಿ ಸ್ಕ್ಯಾನ್ ಮಾಡಿಸಿಬಿಡುವುದು ಉತ್ತಮ.'

'ಡಾಕ್ಟ್ರೆ, ಸಿಟಿ ಅಂದರೆ ಯಾವ ಸಿಟಿ? ಮುಂಬಯಿಯೋ ದೆಹಲಿಯೋ? ನಾನೊಬ್ಬ ಪಿಂಚಣಿ ಇಲ್ಲದ ಬಡ ಪತ್ರಕರ್ತ, ಅಲ್ಲಿಗೆಲ್ಲ ಹೋಗಲು ನನ್ನಲ್ಲಿ ದುಡ್ಡಿಲ್ಲ.'

'ಇಲ್ರೀ, ಇಲ್ಲೇ ಬೆಂಗಳೂರಿನಲ್ಲೇ ಮಾಡ್ತಾರೆ' ಎಂದು ಜಯನಗರದಲ್ಲಿನ ಯಾವುದೇ ಲ್ಯಾಬಿಗೆ ಚೀಟಿ ಬರೆದುಕೊಟ್ಟರು. ನಾನು ಬಂದದ್ದೆಲ್ಲ ಬರಲಿ ಎಂದುಕೊಂಡು ಮನೆಗೆ ಬಂದು ಬಿಟ್ಟೆ.

'ಏನಂದರು ಆರ್ಥೋ ಸರ್ಜನ್?'

ಮಗರಾಯನ ಎನ್‌ಕ್ವೈರಿ. ಚೀಟಿ ತೋರಿಸಿದೆ.